**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ 62/2019 ಸಿ.ಡಬ್ಲ್ಯೂ –01 ಪಿ.ಡಬ್ಲ್ಯೂ -01

| | | |
|---|---|---|
| ಹೆಸರು | ಃ | ಶಿವಪುತ್ರ |
| ತಂದೆಃ ಗಂಡ | ಃ | ಬಾಬು @ ಬಸಣ್ಣಾ ಬಳ್ಳೂರ್ಗಿ |
| ವಯಸ್ಸು | ಃ | 50 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | ಃ | ಯಳಸಂಗಿ |

ದಿನಾಂಕಃ 12.09.2025

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಂದುವರೆದ ಮುಖ್ಯ ವಿಚಾರಣೆ ಮಾನ್ಯ ಸ.ಸ.ಅ ಅವರಿಂದ ಃ**

ಆರೋಪಿ ನನ್ನ ತಮ್ಮನಾಗಬೇಕು. ಚಾಸಾ 1 ರಿಂದ 5 ಪರಿಚಯ. ದಿಃ 13-10-2018 ರಂದು ನಾನು ನನ್ನ ಹೊಲಕ್ಕೆ ಬಿತ್ತುವ ಸಲುವಾಗಿ ಹೊದಾಗ ಆರೋಪಿಯು ಬಾವಿ ಹತ್ತಿರ ಏನು ಮಾಡುತ್ತಿದ್ದನ್ನು ನೋಡಿ ನಾನು ಏನು ಮಾಡುತ್ತಿದಿಯಾ ಅಂತಾ ಕೇಳಿದಾಗ ಅವನು ನನಗೆ ಅವಾಚ್ಯವಾಗಿ ಬೋಸಡಿ ಮಗನೆ ಬೈದು ಎದೆಯ ಮೇಲಿನ ಅಂಗಿ ಹಿಡಿದು ಹೊಡೆ ಬಡೆ ಮಾಡಿರುತ್ತಾರೆ. ನೀನು ಊರಿನಲ್ಲಿ ಹೇಗೆ ಜೀವನ ಮಾಡುತ್ತಿಯಾ ಅಂತಾ ನೋಡುತ್ತೇನೆ ಅಂತಾ ಹೇಳಿ ಕೊಡಲಿಯ ತುಂಬಿನಿಂದ ಹೊಡೆದಿರುತ್ತಾನೆ. ನಾನು ಬಿಡಿಸಿಕೊಂಡು ಓಡಿ ಹೋಗುತಿದ್ದಾಗ ಕಲ್ಲಿನಿಂದ ಹೊಡೆದಿರುತ್ತಾನೆ. ನಂತರ ಆರೋಪಿಯ ಮೋಟಾರ ಮತುತ ಅದರ ಡಬ್ಬಿಯನ್ನು ಕಲ್ಲಿನಿಂದ ಒಡೆದು ಹಾಳು ಮಾಡಿ ಹೋಗಿರುತ್ತಾರೆ, ನಂತರ ನನ್ನ ಬಿತ್ತುವ ಕೆಲಸ ಇದ್ದ ಕಾರಣ ಅದನ್ನು ಮುಗಿಸಿಕೊಂಡು ನಾನು ದಿಃ 17-10-2018 ರಂದು ದೂರನ್ನು ದಾಖಲಿಸಿರುತ್ತೇನೆ. ಸಾಕ್ಷಿಯು ದೂರಿನಲ್ಲಿ ಇರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು ದೂನ್ನು ನಿಪಿ. 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 1 ಎಂದು ಗುರುತಿಸಲಾಯಿತು. ನಾನು ದೂರನ್ನು ನೀಡಿದ ನಂತರ ಪೋಲಿಸರು ಬಂದು ಪಂಚನಾಮೆಯನ್ನು ಮಾಡಿಕೊಂಡು ಹೋಗಿರುತ್ತಾರೆ.

ಸಾಕ್ಷಿಯು ಈಗ ಒಂದು ಕೊಡಲಿ ಕಾವು ಮತ್ತು ಒಂದು ಕಲ್ಲನ್ನು ನೋಡಿ ಗುರುತಿಸಿದ ಕಾರಣ ಅವುಗಳನ್ನು ಕ್ರಮವಾಗಿ ಮು.ಮಾ. 1 ಮತ್ತು 2 ಅಂತಾ ಗುರುತಿಸಲಾಯಿತು.

**(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು).**

ಪಾಟೀ ಸವಾಲು ಃ ಮಾನ್ಯ ಸ.ಸ.ಅ ವಕೀಲರಿಂದ

ಆರೋಪಿಯು ಮೋಟಾರ ಸ್ಟಾಟರನ್ನು ಕಿತ್ತು ಒಗೆದಿರುತ್ತಾನೆ ಎಂದರೆ ಸರಿ. ನನಗೆ ಸದರಿ ಮೋಟಾರ ಹಾಳು ಮಾಡಿದ ಕಾರಣ ಅಂದಾಜು ರೂ. 2000/- ನಷ್ಟ ಆಗಿರುತ್ತದೆ ಎಂದರೆ ಸರಿ. ದಿಃ 13-10-2018 ರಂದು ಬಾವಿಯ ನೀರಿನ ಸಲುವಾಗಿ ಆರೋಪಿಯೊಂದಿಗೆ ತಕರಾರು ಆಗಿತ್ತು ಎಂದರೆ ಸರಿ. ದಿಃ 15-10-2018 ಕ್ಕೆ ಮೇಲೆ ಹೇಳಿದಂತೆ ಘಟನೆ ಆಗಿರುತ್ತದೆ ಎಂದರೆ ಸಾಕ್ಷಿಯು ದಿಃ 13-10-2018 ರಂದು ಘಟನೆ ಆಗಿರುತ್ತದೆ ಅಂತಾ ನುಡಿಯುತ್ತಾರೆ.

ಪಾಟೀ ಸವಾಲು ಃ ಆರೋಪಿತರ ಪರ ಶ್ರೀ. ಕೆ. ಎಮ. ವಕೀಲರಿಂದಃ-

ಘಟನೆಯು 10.30 ರಿಂದ 11.45 ರ ಸಮಯದಲ್ಲಿ ಆಗಿರಬಹುದು. ಘಟನೆ ನಡೆದ ಸಮಯದಲ್ಲಿ ಅಲ್ಲಿ ಯಾರು ಇರಲಿಲ್ಲ. ಮೋಟಾರ ಒಡೆದಿದ್ದನ್ನು ಪೋಲಿಸರು ಪಂಚನಾಮೆಯ ಸಮಯದಲ್ಲಿ ಜಪ್ತಿ ಪಡಿಸಿಕೊಂಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ಈಗಲೂ ಸಹ ಸದರಿ ಮೋಟಾರ ಅಲ್ಲಿಯೇ ಬಿದ್ದಿರುತ್ತದೆ ಎನ್ನುತ್ತಾರೆ. ಸದರಿ ಬಾವಿಯು ನಾವು ಅಣ್ಣತಮ್ಮಂದಿರು ಆದ ಶಿವಪುತ್ರ, ಯಲ್ಲಪ್ಪ ಮತ್ತು ಮಲ್ಲಪ್ಪರವರು ಜಂಟಿಯಾಗಿ ಉಪಯೋಗಿಸುತ್ತೇವೆ. ಜಗಳ ಆದ ಮೇಲೆ 2 ದಿನ ನಾವು ಹೊಲದಲ್ಲಿ ಬಿತ್ತನೆಯ ಕೆಲಸ ಮಾಡಿ 3 ನೇ ದಿನಕ್ಕೆ ದೂರನ್ನು ದಾಖಲಿಸಿರುತ್ತೇನೆ. ಸದರಿ ಮೋಟಾರ ಹಿರಿಯರಿಂದ ಕಾಲದಿಂದ ಇತ್ತು ಯಾವ ಕಂಪನಿಯದು ಅಂತಾ ನನಗೆ ಗೊತ್ತಿಲ್ಲ. ಪೋಲಿಸರು ದಿಃ 18-10-2018 ರಂದು 12.00 ಗಂಟೆ ಸುಮಾರಿಗೆ ಬಂದಿರುತ್ತಾರೆ. ಪೋಲಿಸರು ಚಾಸಾ 2 ಮತ್ತು 3 ರವರನ್ನು ಪಂಚರನ್ನಾಗಿ ಕರೆದುಕೊಂಡು ಬಂದಿರುತ್ತಾರೆ. ನಾನು ಮತ್ತು ನನ್ನ ತಮ್ಮ ಮಲ್ಲಪ್ಪ ಆರೋಪಿಗೆ ಬಾರಕೋಲನಿಂದ ಹೊಡೆದು ಗುಪ್ತಗಾಯ ಮಾಡಿ ನಿರ್ಜಿವ ಆಗುವವರೆಗೂ ಹೊಡೆದಿರುತ್ತೀರಿ ಅಂತಾ ಆರೋಪಿಯು ನನ್ನ ಮತ್ತು ನನ್ನ ತಮ್ಮನ ವಿರುದ್ದ ನಿಂಬರ್ಗಾ ಪೋಲಿಸ್ ಠಾಣೆಯಲ್ಲಿ ದೂರನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪ್ರಕರಣವನ್ನು ದಾಖಲಿಸಿದ ಕಾರಣ ನಾನು ಬೇರೆಯವರ ಸಹಾಯ ಪಡೆದು ಆರೋಪಿಯ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಬಾವಿಯು ನಮ್ಮ ಮೂರು ಅಣ್ಣ-ತಮ್ಮಂದಿರ ಮಧ್ಯೆ ಇದ್ದು ನಾನು ಮತ್ತು ನನ್ನ ತಮ್ಮ ಮಲ್ಲಪ್ಪ ಸೇರಿಕೊಂಡು ಸದರಿ ಬಾವಿಯ ನೀರನ್ನು ಬಳಸಿಕೊಂಡು ಆರೋಪಿಗೆ ನೀರು ಕೊಟ್ಟಿಲ್ಲ ಅಂತಾ ಪ್ರಕರಣವನ್ನು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಯು ನನಗೆ ಎದೆಯ ಮೇಲಿನ ಅಂಗಿ ಹಿಡಿದು ಕೊಡಲಿ ಕಾವಿಯಿಂದ ಹೊಡೆದಿರುತ್ತಾರೆ ಅಂತಾ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಕೊಡಲಿ ಕಾವಿಗೆ, ಕೊಡಲಿ ಇದ್ದೇ ಇರುತ್ತದೆ ಎಂದರೆ ಸರಿಯಲ್ಲ. ಆರೋಪಿಯು ನನ್ನ ವಿರುದ್ದ ಪ್ರಕರಣ ದಾಖಲಿಸಿದ ಕಾರಣ ನಾನು ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಮು. ಮಾ. 2 ರ ತರಹದ ಕಲ್ಲುಗಳು ಎಲ್ಲಾ ಕಡೆ ಸಿಗುತ್ತವೆ ಎಂದರೆ ಸರಿಯಲ್ಲ. ಆರೋಪಿಯು ನನಗೆ ಕಲ್ಲಿನಿಂದ ಹೊಡೆದಿರುತ್ತಾರೆ ಅಂತಾ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ಘಟನೆ ನಡೆದಿದ್ದರೂ ಸಹಿತ ನಾನು ಸುಳ್ಳು ಕಥೆ ಸೃಷ್ಟಿ ಮಾಡಿ ಸುಳ್ಳು ದೂರನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯೇ ಬಾವಿಗೆ ಬೇಕಾಗುವ ಎಲ್ಲಾ ಸಾಮಾಗ್ರಿಗಳನ್ನು ತಂದು ಎಲ್ಲಾ ರೀಪೇರಿ ಮಾಡಿಸಿದರೂ ಸಹಿತ ಅವರಿಗೆ ನೀರು ಕೊಡಬಾರದು ಎನ್ನುವ ಉದ್ದೇಶದಿಂದ ನಾನು ಮತ್ತು ನನ್ನ ತಮ್ಮ ಮಲ್ಲಪ್ಪ ಸೇರಿಕೊಂಡು ಸುಳ್ಳು ಪ್ರಕರಣವನ್ನು

ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ದಿಃ 13-10-2018 ರಂದು ಆರೋಪಿಗೆ ನೀರನ್ನು ತೆಗೆದುಕೊಳ್ಳುವ ಪಾಳಿ ಇದ್ದು ಅದರ ಹಿಂದಿನ ದಿನ ನಾನು ಸದರಿ ನೀರಿನ ಪೈಪಿನ ನಾಜಲ ತೆಗೆದು ನೀರು ಹೋಗಬಾರದು ಅಂತಾ ಮಾಡಿರುತ್ತೇವೆ ಎಂದರೆ ಸರಿಯಲ್ಲ. ದಿಃ 13-10-2018 ರಂದು ನಾನು ನನ್ನ ಹೊಲಕ್ಕೆ ಬಿತ್ತುವ ಸಲುವಾಗಿ ಹೊದಾಗ ಆರೋಪಿಯು ಬಾವಿ ಹತ್ತಿರ ಏನು ಮಾಡುತ್ತಿದ್ದನ್ನು ನೋಡಿ ನಾನು ಏನು ಮಾಡುತ್ತಿದಿಯಾ ಅಂತಾ ಕೇಳಿದಾಗ ಅವನು ನನಗೆ ಅವಾಚ್ಯವಾಗಿ ಬೋಸಡಿ ಮಗನೆ ಬೈದು ಎದೆಯ ಮೇಲಿನ ಅಂಗಿ ಹಿಡಿದು ಹೊಡೆ ಬಡೆ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನೀನು ಊರಿನಲ್ಲಿ ಹೇಗೆ ಜೀವನ ಮಾಡುತ್ತಿಯಾ ಅಂತಾ ನೋಡುತ್ತೇನೆ ಅಂತಾ ಹೇಳಿ ಕೊಡಲಿಯ ತುಂಬಿನಿಂದ ಹೊಡೆದಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಬಿಡಿಸಿಕೊಂಡು ಓಡಿ ಹೋಗುತಿದ್ದಾಗ ಕಲ್ಲಿನಿಂದ ಹೊಡೆದಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಆರೋಪಿಯ ಮೋಟಾರ ಮತುತ ಅದರ ಡಬ್ಬಿಯನ್ನು ಕಲ್ಲಿನಿಂದ ಒಡೆದು ಹಾಳು ಮಾಡಿ ಹೋಗಿರುತ್ತಾರೆ, ನಂತರ ನನ್ನ ಬಿತ್ತುವ ಕೆಲಸ ಇದ್ದ ಕಾರಣ ಅದನ್ನು ಮುಗಿಸಿಕೊಂಡು ನಾನು ದಿಃ 17-10-2018 ರಂದು ದೂರನ್ನು ದಾಖಲಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದೂರನ್ನು ನೀಡಿದ ನಂತರ ಪೋಲಿಸರು ಬಂದು ಪಂಚನಾಮೆಯನ್ನು ಮಾಡಿಕೊಂಡು ಹೋಗಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ಮೋಟಾರ ಸ್ಟಾಟರನ್ನು ಕಿತ್ತು ಒಗೆದಿರುತ್ತಾನೆ ಎಂದರೆ ಸರಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಸದರಿ ಮೋಟಾರ ಹಾಳು ಮಾಡಿದ ಕಾರಣ ಅಂದಾಜು ರೂ. 2000/- ನಷ್ಟ ಆಗಿರುತ್ತದೆ ಎಂದರೆ ಸರಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 13-10-2018 ರಂದು ಬಾವಿಯ ನೀರಿನ ಸಲುವಾಗಿ ಆರೋಪಿಯೊಂದಿಗೆ ತಕರಾರು ಆಗಿತ್ತು ಎಂದರೆ ಸರಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 15-10-2018 ಕ್ಕೆ ಮೇಲೆ ಹೇಳಿದಂತೆ ಘಟನೆ ಆಗಿರುತ್ತದೆ ಎಂದರೆ ಸಾಕ್ಷಿಯು ದಿಃ 13-10-2018 ರಂದು ಘಟನೆ ಆಗಿರುತ್ತದೆ ಅಂತಾ ನುಡಿಯುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲಃ**

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.ಆಳಂದ